ಕರ್ನಾಟಕ ಸರ್ಕಾರ

ಸಂಖ್ಯೆ: ಪಪೂಶಿ/ಶೈಶಾ/ಪ.ಪು.ಅ:05/2016-17

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಕ್ರಾಸ್, ಮಲ್ಲೇಶ್ವರಂ,
ಬೆಂಗಳೂರು-560012
ದಿನಾಂಕ: 19.12.2016

## ಜ್ಞಾಪನಾ

**ವಿಷಯ:** ಪ್ರಥಮ ಪಿಯುಸಿ ಅರ್ಥಶಾಸ್ತ್ರ ವಿಷಯದ ಭಾಷಾಂತರ ಕಾರ್ಯಾಗಾರಕ್ಕೆ ಅನುಮತಿ ನೀಡಿದ ಬಗ್ಗೆ
**ಉಲ್ಲೇಖ:** 1) ಈ ಕಛೇರಿ ಪತ್ರ ಸಂಖ್ಯೆ: ಪಪೂಶಿ/ಶೈಶಾ/ಪ.ಪು.ಅ:02/2016-17 ದಿನಾಂಕ: 03.12.2016
2) ಶ್ರೀಮತಿ ಜಿ.ಬಿ.ನಾಗರತ್ನಮ್ಮ, ಅಧ್ಯಕ್ಷರು ಅರ್ಥಶಾಸ್ತ್ರ ಪಠ್ಯ ಪುಸ್ತಕ ಅನುವಾದ ಸಮಿತಿ, ಪ್ರಾಚಾರ್ಯರು ಸರ್ಕಾರಿ .ಪ.ಪೂ.ಕಾಲೇಜು, ಸಿರಿವಾರ, ತುಮಕೂರು ಜಿಲ್ಲೆ ಇವರ ಪತ್ರ ದಿ 16.12.2016

ಪ್ರಥಮ ಪಿಯುಸಿ ಎನ್.ಸಿ.ಇ.ಆರ್.ಟಿ.ಯ ವ್ಯವಹಾರ ಅಧ್ಯಯನ, ಅರ್ಥಶಾಸ್ತ್ರ ಹಾಗೂ ಲೆಕ್ಕಶಾಸ್ತ್ರ ಪಠ್ಯಪುಸ್ತಕಗಳನ್ನು ಕನ್ನಡ ಭಾಷೆಗೆ ಅನುವಾದಿಸಲು ಉಲ್ಲೇಖ 1 ರಂತೆ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯಲ್ಲಿ ಅರ್ಥಶಾಸ್ತ್ರ ವಿಷಯದ ಅನುವಾದ ಕಾರ್ಯವನ್ನು ಕೈಗೊಂಡು, ದಿನಾಂಕ: 22.12.2016 ರಿಂದ 24.12.2016 ರವರೆಗೆ ಸಮಿತಿಯ ಅಧ್ಯಕ್ಷರು ಮತ್ತು ಸಂಪನ್ಮೂಲ ವ್ಯಕ್ತಿಗಳು ಮೈಸೂರಿನಲ್ಲಿ ಸಭೆ ಸೇರಿ ಚರ್ಚಿಸಲು ತೀರ್ಮಾನಿಸಿದ್ದು, ಇದಕ್ಕೆ ಅನುಮತಿ ಕೋರಿ ಅರ್ಥಶಾಸ್ತ್ರ ಅನುವಾದನಾ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಜಿ.ಬಿ.ನಾಗರತ್ನಮ್ಮ ಇವರು ಉಲ್ಲೇಖ 2 ರಂತೆ ಕೋರಿರುತ್ತಾರೆ.

ಇದರನ್ವಯ ಪ್ರಥಮ ಪಿಯುಸಿ ಎನ್.ಸಿ.ಇ.ಆರ್.ಟಿಯ ಅರ್ಥಶಾಸ್ತ್ರ ಪಠ್ಯಪುಸ್ತಕ ಅನುವಾಧನಾ ಸಮಿತಿಯು ದಿನಾಂಕ 22.12.2016 ರಿಂದ 24.12.2016 ರವರೆಗೆ ಮೈಸೂರಿನಲ್ಲಿ ಸಭೆ ಸೇರಿ, ಚರ್ಚಿಸಲು ಅನುಮತಿಯನ್ನು ನೀಡಿದೆ. ಸಭೆಯಲ್ಲಿ ಭಾಗವಹಿಸುವವರಿಗ ಕೆ.ಸಿ.ಎಸ್.ಆರ್ ನಿಯಮಾನುಸಾರ ಪ್ರಯಾಣ ಭತ್ಯೆ ಹಾಗೂ ದಿನ ಭತ್ಯೆಯನ್ನು ನೀಡಲಾಗುವುದು. ಈ ಸಂಬಂಧ ಸಭೆಯಲ್ಲಿ ಭಾಗವಹಿಸುವವರ ನೋಂದಣಿ, ಹಾಜರಾತಿ ತಃಖ್ತೆ ಹಾಗೂ ಪ್ರಯಾಣಭತ್ಯೆ ಬಿಲ್ಲುಗಳನ್ನು ಈ ಕಛೇರಿಗೆ ಸಲ್ಲಿಸುವುದು.

ಸಭೆ ಆಯೋಜಿಸಲು ಸೂಕ್ತ ವ್ಯವಸ್ಥೆಯನ್ನು ಮಾಡಲು ಉಪನಿರ್ದೇಶಕರು, ಪ.ಪೂ.ಶಿ.ಇ, ಮೈಸೂರು ಇವರಿಗೆ ತಿಳಿಸಿದೆ. ಸಭೆಯ ನಂತರ ಪೂರ್ಣ ವರದಿಯನ್ನು ಈ ಕಛೇರಿಗೆ ಸಲ್ಲಿಸುವುದು.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಯನ್ನು:

1. ಜಂಟಿ ನಿರ್ದೇಶಕರು (ಶೈಕ್ಷಣಿಕ)- ಮಾಹಿತಿಗಾಗಿ
2. ಉಪನಿರ್ದೇಶಕರು, ಪ.ಪೂ.ಶಿ.ಇ, ನಾರಾಯಣಶಾಸ್ತ್ರಿ ರಸ್ತೆ, ಮೈಸೂರು- ಶ್ರೀಮತಿ ಜಿ.ಬಿ.ನಾಗರತ್ನಮ್ಮ , ಅಧ್ಯಕ್ಷರು ಅರ್ಥಶಾಸ್ತ್ರ ಪಠ್ಯ ಪುಸ್ತಕ ಅನುವಾದ ಸಮಿತಿ, ಪ್ರಾಚಾರ್ಯರು ಸರ್ಕಾರಿ .ಪ.ಪೂ.ಕಾಲೇಜು, ಸಿರಿವಾರ, ತುಮಕೂರು ಜಿಲ್ಲೆ ದೂ: 9980352045 ಇವರೊಂದಿಗೆ ಚರ್ಚಿಸಿ, ಊಟ-ವಸತಿ ಮುಂತಾದ ವ್ಯವಸ್ಥೆಯನ್ನು ಕಲ್ಪಿಸಲು ಆದೇಶಿಸಿದೆ.

3. ಶ್ರೀಮತಿ ಜಿ.ಬಿ.ನಾಗರತ್ನಮ್ಮ , ಅಧ್ಯಕ್ಷರು ಅರ್ಥಶಾಸ್ತ್ರ ಪಠ್ಯ ಪುಸ್ತಕ ಅನುವಾದ ಸಮಿತಿ, ಪ್ರಾಚಾರ್ಯರು ಸರ್ಕಾರಿ .ಪ.ಪೂ.ಕಾಲೇಜು, ಸಿರಿವರ, ತುಮಕೂರು ಜಿಲ್ಲೆ– ಉಪನಿರ್ದೇಶಕರು, ಪ.ಪೂ.ಶಿ.ಇ, ಮೈಸೂರು ದೂ: 9480814036, 08212440371 ಇವರೊಂದಿಗೆ ಮುಂದಿನ ಕ್ರಮದ ಬಗ್ಗೆ ಚರ್ಚಿಸಲು ಸೂಚಿಸಿದೆ.
4. ಕಛೇರಿ ಪ್ರತಿ